# ಮೈಸೂರು ಮಹಾನಗರ ಪಾಲಿಕೆ

## ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ ಸಭೆಯ ನಡವಳಿ, ಮೈಸೂರು.

ಸಭೆಯ ದಿನಾಂಕ : 01–07–2009.
ಸಭೆಯ ವೇಳೆ : ಬೆಳಿಗ್ಗೆ 9.00 ಕ್ಕೆ
ಅಧ್ಯಕ್ಷತೆ : ಶ್ರೀ ಮಣಿವಣ್ಣನ್ ಪಿ. ಜಿಲ್ಲಾಧಿಕಾರಿಗಳು ಮತ್ತು ವಿಶೇಷ ಅಧಿಕಾರಿಗಳು ಜವಹರಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆ.

| ಕ್ರ. ಸಂ. | ಹಾಜರಿದ್ದವರು | ಕ್ರ. ಸಂ. | ಹಾಜರಿದ್ದವರು |
|---|---|---|---|
| 1. | ಶ್ರೀ ವಿಶ್ವನಾಥ, ಲೋಕಸಭಾ ಸದಸ್ಯರು | 29. | ಶ್ರೀ ಆರ್. ಲಿಂಗಪ್ಪ, ನಗರ ಪಾಲಿಕೆ ಸದಸ್ಯರು, |
| 2. | ಶ್ರೀ ತನ್ವೀರ್‌ಸೇಠ್, ವಿಧಾನಸಭಾ ಸದಸ್ಯರು | 30. | ಶ್ರೀ ಹೆಚ್.ಎಸ್. ನಂದೀಶ್ ಪ್ರೀತಮ್, ನಗರಪಾಲಿಕೆ ಸದಸ್ಯರು |
| 3. | ಶ್ರೀ ಪುರುಷೋತ್ತಮ್, ಮಾನ್ಯ ಮಹಾಪೌರರು, ಮೈನಪಾ | 31. | ಶ್ರೀ ಅಯೂಬ್‌ಖಾನ್, ಮಾಜಿ ಮೇಯರ್ ಹಾಗೂ ನಗರ ಪಾಲಿಕೆ ಸದಸ್ಯರು |
| 4. | ಶ್ರೀಮತಿ ಶಾರದಮ್ಮ, ಉಪ ಮಹಾಪೌರರು, ಮೈನಪಾ | 32. | ಶ್ರೀ ಕೆಂಪಣ್ಣ, ನಗರಪಾಲಿಕೆ ಸದಸ್ಯರು |
| 5. | ಶ್ರೀ ಡಿ ಮದೇಗೌಡರು, ಮಾಜಿ ವಿಧಾನಪರಿಷತ್ ಸದಸ್ಯರು. | 33. | ಶ್ರೀ ಮುರಳೀಧರ ಜೆಟಿ. ನಗರಪಾಲಿಕೆ ಸದಸ್ಯರು |
| 6. | ಶ್ರೀ ಎಂ.ಕೆ. ಸೋಮಶೇಖರ್, ಮಾಜಿ ವಿಧಾನ ಸಭಾ ಸದಸ್ಯರು. | 34. | ಶ್ರೀ ನಾಗೇಂದ್ರ, ನಗರಪಾಲಿಕೆ ಸದಸ್ಯರು |
| 7. | ಶ್ರೀ ಸಂದೀಪ್ ದವೆ, ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಡಬ್ಲ್ಯೂ.ಎಸ್.&ಡಿ.ಬಿ. | 35. | ಶ್ರೀಮತಿ ರಿಯಾನ ಬಾನು, ನಗರ ಪಾಲಿಕೆ ಸದಸ್ಯರು |
| 8. | ಶ್ರೀ ಕೆ.ಎಸ್. ರಾಯ್ಕರ್, ಆಯುಕ್ತರು, ಮೈನಪಾ | 36. | ಶ್ರೀ ಆರ್. ರವಿಕುಮಾರ್, ನಗರ ಪಾಲಿಕೆ ಸದಸ್ಯರು |
| 9. | ಶ್ರೀ ಜಯಣ್ಣ, ಆಯುಕ್ತರು, ಮೂಡಾ | 37. | ಶ್ರೀ ಆರ್. ಲಿಂಗಪ್ಪ, ನಗರಪಾಲಿಕೆ ಸದಸ್ಯರು |
| 10. | ಶ್ರೀ ಬಿ.ಕೆ. ಸುರೇಶ್‌ಬಾಬು, ಅಇಂ, ಮೈನಪಾ | 38. | ಶ್ರೀಮತಿ ಮಹದೇವಮ್ಮ, ನಗರಪಾಲಿಕೆ ಸದಸ್ಯರು |
| 11. | ಶ್ರೀ ಮಹೇಶ್, ಅಇಂ, ಮೂಡಾ | 39. | ಶ್ರೀ ಆರ್. ಶಿವಣ್ಣ, ನಗರಪಾಲಿಕೆ ಸದಸ್ಯರು |
| 12. | ಶ್ರೀ ಎಸ್. ಎ. ಚಂದ್ರಕಾಂತ್, ಕಾಅ., (ನರ್ಮ್) ಮೈನಪಾ | 40. | ಶ್ರೀ ಗಿರೀಶ್ ಪ್ರಸಾದ್, ನಗರಪಾಲಿಕೆ ಸದಸ್ಯರು |
| 13. | ಶ್ರೀ ಹೊನ್ನೇಗೌಡ, ಕಾಅ., ಕೆಯುಡಬ್ಲ್ಯುಎಸ್ & ಡಿಬಿ | 41. | ಶ್ರೀ ಶಿವಕುಮಾರ್, ನಗರಪಾಲಿಕೆ ಸದಸ್ಯರು |
| 14. | ಶ್ರೀ ನಾಗರಾಜ ಮೂರ್ತಿ, ಕಾಅ., ಕ.ರ.ಸಾ.ಸಂ.ನಿ. | 42. | ಶ್ರೀ ಪಾರ್ಥಸಾರಥಿ, ನಗರಪಾಲಿಕೆ ಸದಸ್ಯರು |
| 15. | ಶ್ರೀ ಡಿ.ಎಲ್. ರಾಜು, ಕಾಅ., ವಿ.ವಿ.ಡಬ್ಲ್ಯೂ. ಡಬ್ಲ್ಯೂ | 43. | ಶ್ರೀ ಜಯಶಂಕರ ಸ್ವಾಮಿ, ನಗರಪಾಲಿಕೆ ಸದಸ್ಯರು |
| 16. | ಶ್ರೀಮತಿ ಸುಧಾ ಎಂ.ವಿ. ಯೋಜನಾ ನಿರ್ದೇಶಕರು, ಡಿ.ಯು.ಡಿ.ಸಿ. ನಗರಾಭಿವೃದ್ಧಿ ಶಾಖೆ. | 44. | ಶ್ರೀ ಚೆನ್ನರವಿ, ನಗರಪಾಲಿಕೆ ಸದಸ್ಯರು |
| 17. | ಶ್ರೀ ರಾಮಚಂದ್ರಯ್ಯ, ಸಕಾಅ, ಕೆ.ಯು.ಡಬ್ಲ್ಯೂಎಸ್.&ಡಿಬಿ. | 45. | ಶ್ರೀ ಚಿಕ್ಕಣ್ಣ ಮಹದೇವಮ್ಮ, ನಗರಪಾಲಿಕೆ ಸದಸ್ಯರು |
| 18. | ಶ್ರೀ ಬಿ.ಎಂ. ಕಪನಿಗೌಡ, ಸಕಾಇಂ, ಕೆ.ಎಸ್.ಸಿ.ಬಿ | 46. | ಶ್ರೀಮತಿ ಆರ್. ಲಕ್ಷ್ಮಿ, ಅಧ್ಯಕ್ಷರು, ಮಹಿಳಾ ಸಂಘ, |
| 19. | ಶ್ರೀ ಎ.ಎನ್.ಪ್ರಸಾದ್, ಸಕಾಇಂ, ಮೈನಪಾ | 47. | ಶ್ರೀ ಎಂ. ಲಕ್ಷ್ಮಣ್, ಎ.ಸಿ.ಐ.ಸಿ.ಎಂ. |
| 20. | ಶ್ರೀ ರಾಘವೇಂದ್ರ ಎಂ.ಆರ್, ಸಕಾಇಂ, ಮೈನಪಾ | 48. | ಶ್ರೀ ಬಾಮಿ ವಿ. ಶಣೈ, ಸದಸ್ಯರು, ಎಂ.ಜಿ.ಪಿ. |
| 21. | ಶ್ರೀ ರಾಮಕೃಷ್ಣ, ಸಕಾಇಂ, ಮೈನಪಾ | 49. | ಶ್ರೀ ನಂಜರಾಜ ಅರಸ್, ನಿವೃತ್ತ ಪ್ರಾಧ್ಯಾಪಕರು |
| 22. | ಶ್ರೀ ಆರ್. ನರಸಿಂಹಮೂರ್ತಿ, ಸಕಾಇಂ, ಮೈನಪಾ | 50. | ಶ್ರೀ ಅರುಣ ಕುಮಾರ್, ವಕೀಲರು |
| 23. | ಶ್ರೀ ಎಂ. ಬಸವರಾಜು, ಸಕಾಇಂ, ಮೈನಪಾ | 51. | ಕರ್ನಾಟಕ ರಕ್ಷಣಾ ವೇದಿಕೆ ಸದಸ್ಯರು |
| 24. | ಶ್ರೀ ಶ್ರೀಧರ್, ಸಕಾಇಂ, ಮೈನಪಾ | 52. | ಶ್ರೀ ಶರತ್ ಹೆಚ್.ಎಸ್, ಐ.ಟಿ. ಆಫಿಸರ್, ಜೆಎನ್‌ನರ್ಮ್ |
| 25. | ಶ್ರೀ ಶ್ರೀ ಬಿ.ಎಲ್ ಭೈರಪ್ಪ, ನಗರಪಾಲಿಕೆ ಸದಸ್ಯರು | 53. | ಶ್ರೀಮತಿ ಶೋಭಾ ಭಟ್, ಹೆಚ್.ಆರ್.ಡಿ.ಒ, ಜೆಎನ್‌ನರ್ಮ್ |
| 26. | ಶ್ರೀ ಹೆಚ್.ಎನ್. ಶ್ರೀಕಂಠಯ್ಯ, ನಗರಪಾಲಿಕೆ ಸದಸ್ಯರು, | 54. | ಶ್ರೀ ಚಿದಂಬರ್ ಬಿ.ಎಸ್, ಪಿ.ಹೆಚ್.ಇ, ಜೆಎನ್‌ನರ್ಮ್ |
| 27. | ಶ್ರೀ ಎಸ್. ಸತೀಶ್ (ಸಂದೇಶಸ್ವಾಮಿ), ನಗರಪಾಲಿಕೆ ಸದಸ್ಯರು, | 55. | ಶ್ರೀ ಪರಮೇಶ್, ಕೆ.ಎಲ್, ಎಸ್.ಡಿ.ಒ, ಜೆಎನ್‌ನರ್ಮ್ |
| 28. | ಶ್ರೀ ಪದ್ಮನಾಭ್, ಅದಕ್ಷರು, ಜಿಲ್ಲಾ ಪ್ಲಾನಿಂಗ್ ಕಮಿಟಿ | 56. | |

ಹಿಂದಿನ ಸಭೆಯ ದಿನಾಂಕ : 24/06/09
ಮುಂದಿನ ಸಭೆಯ ದಿನಾಂಕ : 08/07/09
ಮುಂದಿನ ಸಭೆಯ ವೇಳೆ : ಬೆಳಿಗ್ಗೆ 9.00 ಗಂಟೆಗೆ
ಮುಂದಿನ ಸಭೆಯ ಸ್ಥಳ : ಎಂ.ಸಿ.ಸಿ ಸಭೆಯ ಸಭಾಂಗಣ, ಮೈಸೂರು
ತಯಾರಿಸಿದವರು : ಶ್ರೀ ಬಿ.ಕೆ. ಸುರೇಶ್‌ಬಾಬು
ಕಳುಹಿಸಿರುವುದು : ಶ್ರೀ ಬಿ.ಕೆ. ಸುರೇಶ್‌ಬಾಬು

ಟಿಪ್ಪಣಿ:

- ಎಲ್ಲರೂ ಸಭೆಯ ನಡವಳಿಯ ಪ್ರತಿಯನ್ನು ಮುಂದಿನ ಸಭೆಗೆ ತರಲು ಕೋರಲಾಗಿದೆ.
- ಸಭೆಯ ನಡವಳಿಕೆಗೆ ಪಾಲನಾ ವರದಿಯನ್ನು ಮುಂದಿನ ಸಭೆ ನಡೆಯುವ 2 ದಿವಸಗಳ ಮುಂಚಿತವಾಗಿ ಸಲ್ಲಿಸುವುದು.
- ಅನುಪಾಲನಾ ವರದಿಯನ್ನು ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ ಹಾಗೂ ಸಮನ್ವಯಾಧಿಕಾರಿ, ನರ್ಮ್ ಯೋಜನೆ ಇವರಿಗೆ ಕಳುಹಿಸಿಕೊಟ್ಟು, ಈ ಅಧಿಕಾರಿಯು ವರದಿಯನ್ನು ಕ್ರೋಢಿಕರಿಸಿ, ಈ ಕೆಳಗೆ ಸಹಿ ಮಾಡಿರುವವರಿಗೆ ಒಂದು ದಿವಸ ಮುಂಚಿತವಾಗಿ ಪರಿಶೀಲನೆಗಾಗಿ ಮಂಡಿಸುವುದು.
- ನರ್ಮ್ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರಗಳನ್ನು ಮೈಸೂರು ನಗರಪಾಲಿಕೆಗೆ ಕಳುಹಿಸುವುದು.

* * * * *

ಮಾನ್ಯ ಮಹಾಪೌರರು, ಮೈಸೂರು ನಗರಪಾಲಿಕೆ ಇವರು ಶ್ರೀ ವಿಶ್ವನಾಥ್, ಲೋಕಸಭಾ ಸದಸ್ಯರು, ಶ್ರೀ ತನ್ವೀರ್‌ಸೇಠ್, ವಿಧಾನಸಭಾ ಸದಸ್ಯರು, ಜಿಲ್ಲಾಧಿಕಾರಿಗಳು ಹಾಗೂ ವಿಶೇಷ ಅಧಿಕಾರಿಗಳು ನರ್ಮ್ ಯೋಜನೆ, ಮತ್ತು ಎಲ್ಲಾ ನಗರಪಾಲಿಕೆ ಸದಸ್ಯರುಗಳನ್ನು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಪತ್ರಿಕಾ ಮಾಧ್ಯಮದವರನ್ನು ಹಾಗೂ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು ಪ್ರತಿ ವಾರದ ಸಭೆಯ ಬಗ್ಗೆ ಸಭೆಗೆ ವಿವರಣೆ ನೀಡಿ ನರ್ಮ್ ಯೋಜನೆಯ ಕಾಮಗಾರಿಗಳ ಪ್ರಗತಿಯ ಬಗ್ಗೆ ಪೂರ್ಣ ವಿವರಣೆ ನೀಡಲು ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ ಇವರಿಗೆ ತಿಳಿಸಿದರು.

ಆಯುಕ್ತರು ಮೈಸೂರು ಮಹಾನಗರ ಪಾಲಿಕೆ, ಮೈಸೂರು ರವರು ಪ್ರತಿ ಯೋಜನೆಯ ಬಗ್ಗೆ ಕೆಳಕಂಡಂತೆ ಮಾಹಿತಿ ನೀಡಿದರು.

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರ |
|---|---|---|---|
| 1 | ಮೈಸೂರು ನಗರದಲ್ಲಿ ನೀರು ಸರಬರಾಜು ನೆಟ್‌ವರ್ಕ್‌ನ ರೀಮಾಡಲ್ಲಿಂಗ್, ಸಿಸ್ಟಮ್ ಆಟೋಮೇಷನ್ ಮತ್ತು ಸಮಗ್ರ ನಿರ್ವಹಣಾ ವ್ಯವಸ್ಥೆ ಒದಗಿಸುವ ಯೋಜನೆ: ಯೋಜನಾ ಅಂದಾಜು ಮೊತ್ತ ರೂ.65.56 ಕೋಟಿಗಳು<br>ಯೋಜನಾ ಮುಕ್ತಾಯ ದಿನಾಂಕ:ಜನವರಿ-2010 | ಜೂನ್ 2009ರ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 56.20 ಕೋಟಿಗಳ ಎದುರಾಗಿ ರೂ. 55.91 ಕೋಟಿಗಳ ಮೊತ್ತದ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ..<br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 53.86 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಇವುಗಳಲ್ಲಿ 33.76 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿದ್ದು, 52.95 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 48.14 ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 15.03 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ.<br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 18.87 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 14.71 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.<br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಂದು ತಿಳಿಸಿದರು. | |
| 2 | ಸ್ಕಾಡಾ ಯೋಜನೆ: ಅಂದಾಜು ಮೊತ್ತ: ರೂ. 5.24 ಕೋಟಿ<br>Agency: M/s. Mechatronics | ಪೈಪ್‌ಲೈನ್‌ಗಳ ಜೋಡಣೆ ಕಾಮಗಾರಿಯು ಪ್ರಗತ್ತಿಯಲಿದ್ದು ಆಗಸ್ಟ್ ಅಂತ್ಯದೊಳಗೆ ಮುಗಿಸಲಾಗುವುದೆಂದು ತಿಳಿಸಿಲಾಯಿತು. | |

| ಕ್ರ ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರ |
|---|---|---|---|
| | ಅವಧಿ: 9 ತಿಂಗಳು<br>ಮುಕ್ತಾಯ ವಾಗಬೇಕಾದುದು : ಜುಲೈ-2009 | | |
| 3 | 24 x 7 ನೀರು ಸರಬರಾಜು<br>ಪಶ್ಚಿಮ ವಲಯ: ಅಂದಾಜುಮೊತ್ತ 56.07 ಕೋಟಿ ರೂ. ಸಿಎಸ್‌ಆರ್, ಕುವೆಂಪುನಗರ ಹೆಚ್.ಎಲ್.ಆರ್ ವಲಯದ ಭಾಗಶ: ವಲಯಗಳು ಮತ್ತು ಪೂರ್ವವಲಯ ಹೆಚ್.ಎಲ್.ಆರ್ ವಲಯದ ಭಾಗಶ: ಅಂದಾಜುಮೊತ್ತ 45.84 ಕೋಟಿ ರೂ. ಜರ್ಮನ್ ಪ್ರೆಸ್, ದೇವನೂರು, ಬಳ್ಳಾಲ್ ವೃತ್ತ ವಲಯಗಳು ಮತ್ತು ಹೆಚ್.ಎಲ್.ಆರ್ ವಲಯದ ಭಾಗಶ:<br>ಮುಕ್ತಾಯವಾಗಬೇಕಾದುದು: Jan-2013 | ವಿವರವಾಗಿ ಪ್ರತ್ಯೇಕವಾಗಿ ಚರ್ಚಿಸಲಾಗಿದೆ. | |
| 4 | ಮೈಸೂರು ನಗರಕ್ಕೆ ಸಗಟು ನೀರು ಸರಬರಾಜನ್ನು ಕಬಿನಿ ನದಿಯಿಂದ ತರುವ ಯೋಜನೆ:<br>**ಯೋಜನೆಯ ಅಂದಾಜು ರೂ.** 108.81 ಕೋಟಿ<br>ಮುಕ್ತಾಯವಾಗಬೇಕಾದುದು Jan-2012 | ಕೆ.ಯು.ಡಬ್ಲ್ಯೂಎಸ್.&ಡಿಬಿ ವತಿಯಿಂದ ಕೈಗೆತಿಕೊಳ್ಳಲಾಗಿರುವ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಹೆಚ್ಚಿನ ಸಿಬ್ಬಂದಿಗಳ ಅವಶ್ಯಕತೆ ಇರುವುದರಿಂದ, ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲು ಕ್ರಮತೆಗೆದುಕೊಳ್ಳುವಂತೆ ಸಭೆಯಲ್ಲಿ ಹಾಜರಿದ ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಡಬ್ಲ್ಯೂಎಸ್.&ಡಿಬಿ ಇವರನ್ನು ಕೋರಲಾಯಿತು.<br><br>ಸದರಿ ಕಾಮಗಾರಿಗೆ ಅವಶ್ಯವಿರುವ ಭೂಮಿಯನ್ನು ಜುಲೈ 10ರೊಳಗೆ ಒದಗಿಸಿಕೊಡುವುದಾಗಿ ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು. ಇದನ್ನು ಪರಿಗಣನೆಗೆ ತೆಗೆದುಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ ಕ್ರಿಯಾಯೋಜನೆಯನ್ನು ತಯಾರಿಸಿ ಸಲ್ಲಿಸಲು ಸೂಚಿಸಲಾಯಿತು. | |
| 5 | ಮೈಸೂರು ನಗರದ 20 ಆಯ್ದ ಕೊಳಚೆ ಪ್ರದೇಶಗಳ ಪುನರ್ ವಸತಿ ಯೋಜನೆ: ಅಂದಾಜು ವೆಚ್ಚ: **ರೂ. 45.27 ಕೋಟಿಗಳು.** ಹಂತ–೧<br>ಮುಕ್ತಾಯವಾಗಬೇಕಾದುದು Jan-2012 | ಜೂನ್ 2009ರ ಅಂತ್ಯಕ್ಕೆ ನಿಗಧಿಪಡಿಸಿದ್ದ ರೂ.14.31 ಕೋಟಿ ಮೊತ್ತದ ಗುರಿಗಳಿಗೆ ಅನುಗುಣವಾಗಿ ರೂ.14.07 ಕೋಟಿ ಮೊತ್ತದ ಆರ್ಥಿಕ ಪ್ರಗತಿಯನ್ನು ಸಾಧಿಸಿರುವುದಾಗಿ ತಿಳಿಸಲಾಯಿತು.<br><br>ಕೊಳಚೆ ನಿರ್ಮೂಲನಾ ಮಂಡಳಿಯ ಕಾಮಗಾರಿಗಳ ವಿಷಯಕ್ಕೆ ಸಂಬಂಧಿಸಿದಂತೆ, ಚರ್ಚಿಸಲು ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಮಾನ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಎಲ್ಲಾ ನಗರಪಾಲಿಕೆ ಸದಸ್ಯರುಗಳ ಸಭೆಯನ್ನು ಏರ್ಪಡಿಸುವಂತೆ ಸೂಚಿಸಲಾಯಿತು. | |
| 6 | ಆಯ್ದ ಮೈಸೂರು ನಗರದ 46 ಕೊಳಚೆ ಪ್ರದೇಶಗಳ ಪುನರ್‌ವಸತಿ ಯೋಜನೆ ಅಂದಾಜು ಮೊತ್ತ: **ರೂ. 90.93 ಕೋಟಿಗಳು.** ಹಂತ–೨ | ಜೂನ್ 2009ರ ಅಂತ್ಯಕ್ಕೆ ನಿಗಧಿಪಡಿಸಿದ್ದ ರೂ.4.85 ಕೋಟಿ ಮೊತ್ತದ ಗುರಿಗಳಿಗೆ ಅನುಗುಣವಾಗಿ ರೂ.3.15 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಿದ್ದು ಕುಂಠಿತ ಪ್ರಗತಿಯನ್ನು ಪ್ರಸ್ತುತ ತಿಂಗಳಲ್ಲಿ ಸಾದಿಸುವುದಾಗಿ ತಿಳಿಸಿದರು. | |

| ಕ್ರ ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರ |
|---|---|---|---|
| | ಮುಕ್ತಾಯವಾಗಬೇಕಾದುದು Jan-2010 | | |
| 7 | ಏಕಲವ್ಯ ನಗರದಲ್ಲಿ ಮನೆಗಳ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ದಿ ಯೋಜನೆ:<br>ಯೋಜನಾ ವೆಚ್ಚ.<br>ರೂ. 47.78 ಕೋಟಿಗಳು.<br>1040 ಮನೆಗಳು<br>ಮುಕ್ತಾಯವಾಗಬೇಕಾದುದು Dec-2010 | – | |
| 8 | ಮೈಸೂರು ನಗರದ ಸಾರಿಗೆ ವ್ಯವಸ್ಥೆಗೆ ಮೂಲಭೂತ ಸೌಕರ್ಯ ಒದಗಿಸುವುದು.<br>ಯೋಜನಾ ವೆಚ್ಚ: ರೂ 85.25 ಕೋಟಿಗಳು. ಗುತ್ತಿಗೆ ಪ್ರೀಮಿಯಂ: 17.50% ಮೇಲ್ಪಟ್ಟು (ರೂ108.59 ಕೋಟಿ)<br>ಗುತ್ತಿಗೆ ಅವಧಿ: ಮಾನ್ಸೂನ್ ಬಿಟ್ಟು 18 ತಿಂಗಳು (3 ತಿಂಗಳು ಮಾನ್ಸೂನ್ ಕಾಲ) | 2009ರ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ 35.30 ಕೋಟಿಗಳ ಎದುರಾಗಿ ರೂ. 35.27 ಕೋಟಿಗಳು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದೆಯೆಂದು ತಿಳಿಸಿರುತ್ತಾರೆ. ಭೌತಿಕ ಮತ್ತು ಆರ್ಥಿಕ ಪ್ರಗತಿಯು ನಿಗಧಿತ ಗುರಿಯಂತೆ ಇರುವುದಾಗಿ ತಿಳಿಸಿದರು. | |
| 9 | 1.ಮೈಸೂರು–ಬೆಂಗಳೂರು ರಸ್ತೆಯಿಂದ ಮೈಸೂರು–ನಂಜನಗೂಡುವರೆಗೆ 2 ಪಥದ ಹೊರ ವರ್ತುಲದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0+0.25 ಕಿ.ಮೀ ಪಶ್ಚಿಮದ ಕಡೆಗೆ)<br>2. ಮೈಸೂರು–ಬೆಂಗಳೂರು ಹೊರ ವರ್ತುಲ ರಸ್ತೆಯಿಂದ– ಮೈಸೂರು ಬನ್ನೂರು ರಸ್ತೆವರೆಗೆ 4 ಪಥದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0 ಯಿಂದ 7.49 ಕಿ.ಮೀ ಪೂರ್ವದ ಕಡೆಗೆ)<br>ಅಂದಾಜು ವೆಚ್ಚ: ರೂ. 219.03 ಕೋಟಿಗಳು.<br>ಅನುಮೋದಿಸಿದ ದಿ: 15–2–2008 | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಘನ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವು ಇತ್ಯರ್ಥವಾಗಿದ್ದು, ಕಾಮಗಾರಿಯ ಆರ್ಥಿಕ ಬಿಡ್ಡನ್ನು ದಿನಾಂಕ 07.07.2009ರಂದು ತೆರೆಯಲಾಗುವುದೆಂದು ಮತ್ತು ಆಗಸ್ಟ್ 2009 ಮೊದಲ ವಾರದಲ್ಲಿ ಕಾರ್ಯಾದೇಶ ನೀಡಿ ಕಾಮಗಾರಿಯನ್ನು ಪ್ರರಂಭಿಸುವುದಾಗಿ ಆಯುಕ್ತರು ಮೂಡಾ ಇವರು ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರ |
|---|---|---|---|
| 10 | ಘನತ್ಯಾಜ್ಯ ವಸ್ತು ನಿರ್ವಹಣೆ: ಮೈಸೂರು ನಗರದಲ್ಲಿ ಸಮಗ್ರ ಮುನ್ಸಿಪಲ್ ಸಾಲಿಡ್ ವೇಸ್ಟ್ ಮ್ಯಾನೆಜ್‌ಮೆಂಟ್ ಪ್ಲಾಂಟ್ ಅಭಿವೃದ್ಧಿ ಪಡಿಸುವುದು. **ಅನುಮೋದಿತ ದಿ: 19–12–2008** ಯೋಜನೆಯ ಮೊತ್ತ ರೂ. 29.98 ಕೋಟಿ ಮುಕ್ತಾಯವಾಗಬೇಕಾದುದು ಜೂನ್ 2010. | ಭೂಮಿತುಂಬುವ ಕಾಮಗಾರಿಯ ಟೆಂಡರಿಗೆ ಸಂಬಂಧಿಸಿದಂತೆ, ಆರ್ಥಿಕ ಬಿಡ್ಡಿನ ಮೌಲ್ಯಮಾಪನ ಮೆ॥ ಐಡೆಕ್‌ನವರಿಂದ ನಡೆಸುತ್ತಿರುವುದಾಗಿ ಪಾಲಿಕೆಯ ಆಯುಕ್ತರು ತಿಳಿಸಿದರು. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ, ಮೆ॥ ಐಡೆಕ್‌ನವರಿಂದ ಒಂದು ಪ್ರತ್ಯಾಕ್ಷತೆಯನ್ನು ಮುಂದಿನ ಸಬೆಯಲ್ಲಿ ಏರ್ಪಡಿಸುವಂತೆ ಕ್ರಮತೆಗೆದುಕೊಳ್ಳುವಂತೆ ಸೂಚಿಸಲಾಯಿತು. | |
| 11 | ಮೈಸೂರುನಗರದ ಪಾರಂಪರಿಕ ಕಟ್ಟಡಗಳು ಹಾಗೂ ವೃತ್ತಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು. ಅಂದಾಜು ವೆಚ್ಚ: **ರೂ 20.00 ಕೋಟಿಗಳು.** | ಚರ್ಚಿಸಲಾಗಲಿಲ್ಲ | |
| 12 | ಪ್ರವಾಸಿಗಳ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆ ಮೈಸೂರು– ಪ್ಯಾಕೇಜ್ 1 | ಚರ್ಚಿಸಲಾಗಲಿಲ್ಲ | |
| 13 | ದೊಡ್ಡ ಮಳೆನೀರು ಚರಂಡಿ ಪುನರ್ ನಿರ್ಮಾಣ ಅಂದಾಜು ಮೊತ್ತ: ರೂ 384.60 ಕೋಟಿಗಳು (ಸದ್ಯಕ್ಕೆ ರೂ 125.00 ಕೋಟಿಗೆ ಮಿತಿಗೊಳಿಸಲಾಗಿದೆ) ಮುಕ್ತಾಯವಾಗಬೇಕಾದುದು ಡಿಸೆಂಬರ್ 2010. | ಚರ್ಚಿಸಲಾಗಲಿಲ್ಲ | |

ನಂತರ 24 x 7 ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ, ವಿವರವಾಗಿ ಚರ್ಚಿಸಲಾಯಿತು. ಪ್ರಾರಂಭದಲ್ಲಿ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಜಲಮಂಡಳಿ ಇವರು ಸದರಿ ಯೋಜನೆಯ ಬಗ್ಗೆ ತಾಂತ್ರಿಕ ವಿವರಣೆಗಳನ್ನು ಸಬೆಗೆ ನೀಡಿದರು. ಸದರಿ ಯೋಜನೆಗೆ ಸಂಬಂಧಿಸಿದಂತೆ, ಪಾರದರ್ಶಕ ನಿಯಮಾನುಸಾರ ಕ್ರಮ ತೆಗೆದುಕೊಂಡು ಗ್ಲೋಬಲ್ ಟೆಂಡರ್ ಕರೆದು ಕನಿಷ್ಠ ಮೊತ್ತ ನಮೂದಿಸಿರುವ ಮೆ// ಜಸ್ಕೋ ಕಂಪನಿಗೆ ಕಾಮಗಾರಿಯನ್ನು ವಹಿಸಲಾಗಿರುತ್ತದೆಯೆಂದು ವಿವರಣೆ ನೀಡಿದರು.

ನಂತರ ಈ ಬಗ್ಗೆ ಸಬೆಯಲ್ಲಿ ಹಾಜರಿದ್ದ ಎಲ್ಲಾ ಗಣ್ಯರ ಮತ್ತು ಸಂಘ ಸಂಸ್ಥೆಗಳ ಪ್ರತಿನಿಧಿಗಳ ಅಭಿಪ್ರಾಯ ಪಡೆಯಲಾಯಿತು. ವಿವರಗಳು ಕೆಳಕಂಡಂತೆ ಇರುತ್ತದೆ.

- ಮಾನ್ಯ ಶ್ರೀ ಹೆಚ್. ವಿಶ್ವನಾಥ್, ಲೋಕಸಭಾ ಸದಸ್ಯರು ಮಾತನಾಡಿ, ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡಿರುವ ಎಲ್ಲಾ ಯೋಜನೆಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಸೂಚಿಸಿದರು. ಜಸ್ಕೊ ಕಂಪನಿಯಿಂದ ನಿರ್ವಹಿಸುವ ಯೋಜನೆ ಬಗ್ಗೆ ಮೇಲ್ವಿಚಾರಣೆ ಮಾಡುವುದಕ್ಕೆ ತಾಂತ್ರಿಕ ಪರಿಣತೆ

ಹೊಂದಿರುವ ತಂಡವನ್ನು ರಚಿಸಲು ಸೂಚಿಸಿದರು. ಮೈಸೂರು ನಗರದ ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ಪೈಪುಗಳು ಮತ್ತು ಒಳಚರಂಡಿ ಪೈಪುಗಳು ಸಮಾನಾಂತರವಾಗಿ ಅಳವಡಿಸಿರುವುದರಿಂದ ಕುಡಿಯುವ ನೀರು ಕಲುಷಿತಗೊಳ್ಳುತ್ತಿದೆ. ಇದರಿಂದ ಸಾರ್ವಜನಿಕರ ಆರೋಗ್ಯ ಹದಗೆಡುತ್ತಿದ್ದು, ಸದರಿ ಪೈಪ್‌ಲೈನ್‌ಗಳ ಬಗ್ಗೆ ಪೂರ್ಣ ವಿವರ ಪಡೆದು ಅಧಿಕ ಎಚ್ಚರ ವಹಿಸಿ ಸರಿಪಡಿಸಲು ತಾಂತ್ರಿಕವಾಗಿ ಯೋಜನೆಯನ್ನು ತಯಾರಿಸಲು ಸೂಚಿಸಿದರು. ಮೈಸೂರಿನ ಹಳೆ ಪ್ರಾಂತ್ಯದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದ್ದು ಇದನ್ನು ಸರಿಪಡಿಸುವ ಬಗ್ಗೆ ಹೆಚ್ಚಿನ ಆಧ್ಯತೆ ನೀಡಲು ಸೂಚಿಸಿದರು. ಯೋಜನೆಯನ್ನು ತಯಾರಿಸುವುದಕ್ಕೆ ಮುನ್ನ ಮೈಸೂರಿನ ಜನಸಂಖ್ಯೆಯನ್ನು ಸರಿಯಾಗಿ ಪರಿಗಣಿಸಲು ಈಗಾಗಲೇ ಜಸ್ಕೋ ಕಂಪನಿಯವರು ನೀರು ಸರಬರಜು ಯೋಜನೆಯ ಸರ್ವೆ ಮಾಡುತ್ತಿದ್ದು ಅದರ ಜೊತೆ ಮನೆ ಮನೆ ಸರ್ವೆ ಮಾಡಿ ಜನಸಂಖ್ಯೆಯ ಬಗ್ಗೆ ಸರಿಯಾದ ಮಾಹಿತಿ ಸಂಗ್ರಹಿಸಲು ಸೂಚಿಸಿದರು. ಈ ಮಾಹಿತಿಗನುಗುಣವಾಗಿ ಮುಂದಿನ 25–30 ವರ್ಷಗಳ ಬೆಳವಣಿಗೆಯನ್ನು ಪರಿಗಣಿಸಿ ಮೈಸೂರು ನಗರಕ್ಕೆ ಸೂಕ್ತ ಯೋಜನೆಯನ್ನು ಹೊಸ ತಾಂತ್ರಿಕತೆಯನ್ನು ಅಳವಡಿಸಿ ನಿವೃತ್ತ ಇಂಜಿನಿಯರ್‌ಗಳ ಮತ್ತು ವಿಷಯ ಪರಿಣತರ ಸಲಹೆ ಪಡೆದು ಯೋಜನೆಯನ್ನು ತಯಾರಿಸಲು ಸೂಚಿಸಿದರು.

- ಶ್ರೀ ಲಕ್ಷ್ಮಣ್, ಸಂಚಾಲಕರು, ಎ.ಸಿ.ಐ.ಸಿ.ಎಂ ರವರು ಮಾತನಾಡಿ ಜಸ್ಕೋ ಕಂಪನಿ ವತಿಯಿಂದ ಪೈಪ್‌ಲೈನ್‌ಗಳ ಅಳವಡಿಸುವ ಕಾಮಗಾರಿಯ ಬಗ್ಗೆ ತಮ್ಮ ಯಾವುದೇ ವಿರೋಧವು ಇಲ್ಲ. ಆದರೆ 24X7ನೀರು ಸರಬರಾಜು ಯೋಜನೆಯ ಬಗ್ಗೆ ಪ್ರಸ್ತಾವನೆ ಮತ್ತು ಅನುಮೋದನೆ ಪಡೆದಿರುವ ಬಗ್ಗೆ ವಿವರಣೆಯನ್ನು ನೀಡಲು ಕೋರಿದರು. 24X7ನೀರು ಸರಬರಾಜು ಯೋಜನೆಯನ್ನು ಮೈಸೂರು ನಗರ ವ್ಯಾಪ್ತಿಯಲ್ಲಿ ನೀಡಲು ತಯಾರಿಸಿದ್ದು ಇದನ್ನು ಇಡೀ ಮೈಸೂರು ನಗರಕ್ಕೆ ಏಕೆವಿಸ್ತಾರ ಮಾಡಬಾರದು ಎಂದು ಸಭೆಯ ಗಮನಕ್ಕೆ ತಂದರು. 25.00 ಕೋಟಿ ರೂಗಳನ್ನು ಜಸ್ಕೋ ಕಂಪನಿಯವರಿಗೆ ಮ್ಯಾನೇಜ್‌ಮೆಂಟ್ ಫೀ ಯಾಗಿ ನೀಡುವ ಬಗ್ಗೆ ವಿರೋಧ ವ್ಯಕ್ತಪಡಿಸಿದರು. ಎಲ್ಲಾ ಭಾಗದಲ್ಲಿ ಒತ್ತಡಪೂರಿತ ನೀರು ಸರಬರಾಜು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದರು.

- ಶ್ರೀ ಅರುಣ್‌ಕುಮಾರ್, ವಕೀಲರವರು ಮಾತನಾಡಿ ನರ್ಮ್ ಯೋಜನೆಯ ಕಾಮಗಾರಿಗಳಿಗೆ ಅನೇಕ ವಿರೋಧವು ವ್ಯಕ್ತವಾಗುತ್ತಿದೆ. ಇದರಿಂದ ಕಾಮಗಾರಿಗಳ ಪ್ರಗತಿಯಾಗುತ್ತಿಲ್ಲ. ಆದಕಾರಣ ಮೊದಲಿಗೆ ತಾಂತ್ರಿಕ ಸಮಿತಿಯನ್ನು ರಚಿಸಿ ಇದರಲ್ಲಿ ಎನ್.ಜಿ.ಓ ಗಳ ಜೊತೆ ಕೂಡಿ ಅವರ ಸಲಹೆಗಳನ್ನು ತೆಗೆದುಕೊಳ್ಳುವಂತೆ ಸೂಚಿಸಿದರು. ಆರ್ಥಿಕ ನಿರ್ವಹಣೆಯ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡಲು ಕೋರಿದರು. ಮೈಸೂರಿನ ಕೆಲವು ಬಡಾವಣೆಗಳಿಗೆ ಬೋರ್‌ವೆಲ್ ನೀರನ್ನು ಪೂರೈಸುತ್ತಿದ್ದು, ಇದರ ಶುದ್ದತೆಯ ಬಗ್ಗೆ ಸಂಪೂರ್ಣ ವರದಿಯನ್ನು ನೀಡಲು ಕೋರಿದರು. 24X7 ಯೋಜನೆಯ ಬಗ್ಗೆ ಸಂಪೂರ್ಣ ವರದಿಯ ಬಗ್ಗೆ ಮಾಹಿತಿಯನ್ನುನೀಡಲು ಕೋರಿದರು. ಮೈಸೂರು ನಗರದ ಮೂಡಾ ಲೇಔಟ್‌ಗಳ ಮೀಟರ್‌ಗಳಲ್ಲಿ ಯಾವುದೇ ಲೋಪದೋಷಗಳಿಲ್ಲ ಎಂಬುದನ್ನು ತಿಳಿಸಿ ಇದಕ್ಕೆ ಬದಲಾಗಿ ರೆವಿನ್ಯೂ ಬಡಾವಣೆಗಳಿಗೆ ಮೀಟರ್‌ಗಳನ್ನು ಅಳವಡಿಸಲು ಹೆಚ್ಚು ಆಧ್ಯತೆ ನೀಡಬೇಕೆಂದು ಕೋರಿದರು.

- ಶ್ರೀ ನಂಜರಾಜ ಅರಸ್ ಮಾತನಾಡಿ ಜಸ್ಕೋ ಇವರು ಸದರಿ ಯೋಜನೆಯನ್ನು ಅನುಷ್ಠಾನ ಮಾಡುವುದಕ್ಕಾಗಿ ತಮ್ಮ ಆಕ್ಷೇಪಣೆಯನ್ನು ತಿಳಿಸಿದರು.

- ಇದಕ್ಕೆ ಉತ್ತರವಾಗಿ ಜಿಲ್ಲಾಧಿಕಾರಿಗಳು ಮೊದಲಿಗೆ ಕೆ.ಯು.ಡಬ್ಲ್ಯೂಎಸ್ & ಡಿ.ಬಿ ಯೋಜನೆ ತಯಾರಿಸಿದಾಗ ನಾವು ಕೇವಲ 6 ತಾಸು ನೀರು ಸರಬರಜು ನೀಡಲು ಡಿ.ಪಿ.ಆರ್ ತಯಾರಿಸಿದೆವು. ನಂತರ ಅದು ಕೇಂದ್ರ ಸರ್ಕಾರದ ಮಟ್ಟದಲ್ಲಿ 24X7ನೀರು ಸರಬರಾಜು ಮಾಡಲು ಷರತ್ತು ಹಾಕಿದರು. ಮೊದಲಿಗೆ ಈ ಯೋಜನೆಯಡಿ 65 ವಾರ್ಡ್‌ಗಳಿಗೆ 24X7ನೀರು ಸರಬರಾಜು ಮಾಡಲಾಗುವುದು. ನಂತರ ಹೆಚ್ಚಿನ ಅನುಮೋದನೆ ದೊರೆತರೆ 24X7ನೀರು ಸರಬರಾಜು ವ್ಯಾಪ್ತಿಯನ್ನು ವಿಸ್ತರಿಸಲಾಗುವುದು. ಆಡಳಿತದ ಶುಲ್ಕದ ಬಗ್ಗೆ ಜಸ್ಕೋ ಕಂಪನಿಯವರು ನಿರ್ವಹಿಸಿರುವ ಕಾಮಗಾರಿಯ ಬಿಲ್ಲುಗಳನ್ನು ಸಲ್ಲಿಸಿದ ಮೇಲೆ ಅವರಿಗೆ ಹಣ ನೀಡಲಾಗುವುದು.
- ಶ್ರೀ ಭಾಮಿ ವಿ ಶೆಣೈ, ಮೈಸೂರು ಗ್ರಾಹಕ ಪರಿಷತ್, ಸದಸ್ಯರವರು ಮಾತನಾಡಿ ಇತರ ದೇಶಗಳಲ್ಲಿ 24X7ನೀರು ಸಮರ್ಪಕವಾಗಿ ನೀಡುತ್ತಿದ್ದು, ಮೈಸೂರಿನಲ್ಲಿ ನೀಡಲು ಏಕೆ ಸಾಧ್ಯವಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು ಹಾಗೂ ಇಡೀ ನಗರಕ್ಕೆ ಸರಬರಾಜು ಮಾಡಬಹುದೆಂದು ತಿಳಿಸಿದರು. ಸದರಿ ಯೋಜನೆಯನ್ನು ಜಸ್ಕೋ ಕಂಪನಿಗೆ ನೀಡಲು ಯಾವುದೇ ವಿರೋಧವಿಲ್ಲವೆಂದು ತಿಳಿಸಿದರು. ಇದು ಯಾವುದೇ ರೀತಿಯ ಖಾಸಗೀಕರಣವಲ್ಲವೆಂದು ತಿಳಿಸಿದರು.

- ಶ್ರೀ ಮಾದೇಗೌಡರು, ಮಾಜಿ ವಿಧಾನ ಪರಿಷತ್ ಸದಸ್ಯರು ರವರು ಮಾತನಾಡಿ, ಇದುವರೆವಿಗೂ ನಡೆದ ಸಭೆಯಲ್ಲಿ ಚರ್ಚೆಗಳನ್ನು ಗಮನಿಸಿದಾಗ ಯೋಜನೆಯ ಬಗ್ಗೆ ಕೇವಲ ಸಂಶಯ ಮತ್ತು ಗೊಂದಲ ವ್ಯಕ್ತವಾಗಿರುವುದು ಕಂಡು ಬರುತ್ತದೆ. ಆದಕಾರಣ ಜನಪ್ರತಿನಿಧಿಗಳಿಗೂ ಮತ್ತು ಸಾರ್ವಜನಿಕರಿಗೆ ಸಂಬಂಧಪಟ್ಟವರು ಸರಿಯಾದ ಮಾಹಿತಿಯನ್ನು ನೀಡಲು ಸೂಚಿಸಿದರು. ಯೋಜನೆ ನಿರ್ವಹಣೆ ಬಗ್ಗೆ ಎನ್.ಜಿ.ಓ ಮತ್ತು ಸಾರ್ವಜನಿಕರ ಅಭಿಪ್ರಾಯವನ್ನು

ಪರಿಗಣಿಸಲು ಸೂಚಿಸಿದರು. ಯೋಜನೆಯ ಆರ್ಥಿಕ ಪ್ರಗತಿಯ ಬಗ್ಗೆ ಗಮನಿಸಿದಾಗ ಈವರೆಗೆ ಕೇವಲ 10% ರಷ್ಟು ಹಣ ಖರ್ಚಾಗದಿರುವುದು ಮತ್ತು ಶೇ 20% ರಷ್ಟು ಹಣ ಬಿಡುಗಡೆ ಮಾಡಿದ್ದು, ಲಭ್ಯವಿದ್ದ ಸಮಯದಲ್ಲಿ ಎಲ್ಲಾ ಯೋಜನೆಗಳನ್ನು ಅನುಷ್ಠಾನಕ್ಕೆತಂದು ಕಾರ್ಯಪ್ರವೃತ್ತರಾಗಲು ಸೂಚಿಸಿದರು.

- ಕನ್ನಡ ರಕ್ಷಣಾ ವೇದಿಕೆ ಸದಸ್ಯರು ಮಾತನಾಡಿ ಯೋಜನೆಯ ನಿರ್ವಹಣೆ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮುನ್ನಾ ಸಾರ್ವಜನಿಕರ ಸಭೆಯನ್ನು ಕರೆದು ಅವರ ಅಭಿಪ್ರಾಯದ ಮೇಲೆ ಮುಂದಿನ ಕ್ರಮ ಕೈಗೊಳ್ಳಲು ಕೋರಿದರು. ತಾಂತ್ರಿಕ ಸಮಿತಿಯಲ್ಲಿ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳ ಸಲಹೆಯನ್ನು ಪಡೆಯಲು ಮತ್ತು ನೀರಿನ ಗುಣಮಟ್ಟವನ್ನು ಪರಿಶೀಲಿಸಲು ಮೈಸೂರಿನಲ್ಲಿರುವ ಸಿ.ಎಫ್.ಟಿ.ಆರ್.ಐ ಸಂಸ್ಥೆಗೆ ವಹಿಸಲು ಕೋರಿದರು.

- ಶ್ರೀ ತನ್ವೀರ್‌ಸೇಠ್, ವಿಧಾನಸಭಾ ಸದಸ್ಯರು ರವರು ಮಾತನಾಡಿ, ಸರ್ ಎಂ ವಿಶ್ವೇಶ್ವರಯ್ಯ ರವರ ಮಾರ್ಗದರ್ಶನದಲ್ಲಿ 1939ರಲ್ಲಿ 75 ಸಾವಿರ ಜನಸಂಖ್ಯೆಗಳನ್ನು ಪರಿಗಣಿಸಿ ನೀರು ಸರಬರಾಜು ಯೋಜನೆ ತಯಾರಿಸಿದ್ದು, ತದ ನಂತರ 1974 ರಲ್ಲಿ 2,75,000 ಜನಸಂಖ್ಯೆಗೆ ಅನುಗುಣವಾಗಿ ಯೋಜನೆಯನ್ನು ಮೇಲ್ದರ್ಜೆಗೆ ಏರಿಸಲಾಯಿತು. ಮೈಸೂರು ನಗರದ ಜನಸಂಖ್ಯೆ ಹೆಚ್ಚಾದ್ದರಿಂದ ನೀರು ಸರಬರಾಜು ಮಾಡುವ ಉದ್ದೇಶದಿಂದ 1984 ರಲ್ಲಿ ನಗರದ ಮೂರು ಭಾಗಗಳಲ್ಲಿ ನೆಲ ಮಟ್ಟದ ಜಲ ಸಂಗ್ರಹಗಾರಗಳನ್ನು ನಿರ್ಮಿಸಲು ಪ್ರಾರಂಭಿಸಿ 1998 ರಲ್ಲಿ ಪೂರ್ಣಗೊಳಿಸಿತು. ಇದರಿಂದ ಕಾಮಗಾರಿಯ ನಿರ್ವಹಣೆಯ ವೆಚ್ಚ ಅಧಿಕವಾಗಿರುವುದು ಕಂಡು ಬಂದಿದೆ. ಮುಂದಿನ ಯೋಜನೆಗಳನ್ನು ನಿರ್ಧಿಷ್ಟ ಸಮಯದಲ್ಲಿ ಅನುಷ್ಠಾನಗೊಳಿಸಲು ಸೂಚಿಸಿದರು. ಬೆಳಗೊಳದಿಂದ ನೀರು ಸರಬರಾಜು ಮಾಡಲು 21 ಲಕ್ಷ ರೂಗಳಲ್ಲಿ ಪಂಪ್ ಖರೀದಿಸಿದ್ದು ಈ ಬಗ್ಗೆ ವಿವರಣೆ ನೀಡಲು ಕೋರಿದರು. ಮೂಡಾ ವತಿಯಿಂದ ಸೆಸ್ ಮತ್ತು ಬೆಟರ್‌ಮೆಂಟ್ ಚಾರ್ಜ್ ಹಾಗೂ ಖಾಸಗೀ ಬಡಾವಣೆಗಳಿಂದ ಸಂಗ್ರಹಿಸುವ ಹಣದ ಬಗ್ಗೆ ವಿವರಣೆ ನೀಡಲು ಕೋರಿದರು. ಮೈಸೂರು ನಗರದಲ್ಲಿ ನಿರ್ಮಿಸುತ್ತಿರುವ ನೀರಿನ ತೊಟ್ಟಿಗಳನ್ನು ಜನಸಂಖ್ಯೆಗೆ ಅನುಗುಣವಾಗಿ ಕನಿಷ್ಠ 3 ದಿವಸ ನೀರನ್ನು ಸಂಗ್ರಹಿಸುವ ಬಗ್ಗೆ ವಿನ್ಯಾಸ ಮಾಡಿದ್ದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದ ರೀತಿ ನೀರು ಒದಗಿಸಬಹುದಾಗಿರುತ್ತದೆ. ಈ ಬಗ್ಗೆ ಕ್ರಮ ವಹಿಸಲು ಕೋರಿದರು. ನಗರ ಪಾಲಿಕೆಯಲ್ಲಿ ಕಂದಾಯ ವಸೂಲಿ ಮಾಡಲು ಮತ್ತು ನೀರಿನ ಕರ ವಸೂಲಿ ಮಾಡಲು ಬೇರೆ ಬೇರೆ ನೌಕರರು ಇದ್ದು ಇವರನ್ನು ಒಟ್ಟುಗೂಡಿಸಿ ಎರಡೂ ವಸೂಲಾತಿಗಳನ್ನು ಒಬ್ಬರಿಂದಲೇ ಮಾಡಿಸಿದ್ದಲ್ಲಿ ನಗರಪಾಲಿಕೆಗೆ ಹೆಚ್ಚು ಹಣ ಸಂಗ್ರಹಿಸಲು ಅನುಕೂಲವಾಗುವುದು. ಮೈಸೂರು ನಗರದಲ್ಲಿ ಈಗಾಗಲೇ 46 ಕೋಟಿ ರೂಗಳು ನೀರಿನ ಕರ ಬಾಕಿ ಇದ್ದು ಈ ಬಗ್ಗೆ ಸೂಕ್ತ ಕ್ರಮ ವಹಿಸುವುದು ಮತ್ತು ಸಾರ್ವಜನಿಕರಿಗೆ ಸಕಾಲದಲ್ಲಿ ನೀರು ಒದಗಿಸಲು ಕ್ರಮ ವಹಿಸಲು ಕೋರಿದರು. ಸರ್ಕಾರದ ವಿವಿಧ ಯೋಜನೆಗಳಿಂದ ನೀಡುತ್ತಿರುವ ಅನುದಾನದಿಂದ ಸಾರ್ವಜನಿಕರಿಗೆ ನೀರನ್ನು ಒದಗಿಸಲು ಯಾವುದೇ ತೊಂದರೆ ಇರುವುದಿಲ್ಲ ಆದ್ದರಿಂದ ಸಾರ್ವಜನಿಕರಿಗೆ ನೀರನ್ನು ಒದಗಿಸಲು ಹೆಚ್ಚಿನ ಆದ್ಯತೆ ನೀಡಬೇಕಾಗಿ ಕೋರಿದರು.

- ಶ್ರೀ ಸಂದೇಶ್‌ಸ್ವಾಮಿ, ನಗರಪಾಲಿಕೆ ಸದಸ್ಯರವರು ಮಾತನಾಡಿ, ಈ ಮೊದಲು 2005 ರಲ್ಲಿ ಕುಡಿಯುವ ನೀರಿಗೆ ತೀವ್ರ ಅಭಾವ ಉಂಟಾದ ಸಂದರ್ಭದಲ್ಲಿ ಪರಿಸ್ಥಿತಿ ಸುಧಾರಣೆಗಾಗಿ ಜಲ ಮಂಡಳಿ ವತಿಯಿಂದ ರೂ. 25 ಲಕ್ಷಗಳ ವೆಚ್ಚದೊಂದಿಗೆ ಸಮೀಕ್ಷೆ ನಡೆಸಿ ರೂ 200 ಲಕ್ಷಗಳಿಗೆ ಯೋಜನಾ ವರದಿ ತಯಾರಿಸಿ ಸಲ್ಲಿಸಲಾಗಿತ್ತು. ಆದರೆ ಆ ಸಂಧರ್ಭದಲ್ಲಿ ಅವಶ್ಯ ಅನುದಾನದ ಕೊರತೆಯಿಂದಾಗಿ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ನರ್ಮ್ ಅಡಿಯಲ್ಲಿ ಅನುದಾನ ಒದಗಿರುವುದರಿಂದ 24 x 7 ಕಾರ್ಯಗತಗೊಳಿಸುವುದು ಅತ್ಯವಶ್ಯಕವಾಗಿರುತ್ತದೆಂದು ತಿಳಿಸುತ್ತಾ ನರ್ಮ್ ಅಡಿಯಲ್ಲಿ ಒದಗಿಸಿರುವ ಅನುದಾನವನ್ನು ನಗರದ ಅಭಿವೃದ್ದಿಗೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ಅಭಿಪ್ರಾಯ ಪಟ್ಟರು.

- ಶ್ರೀ ನಂಧೀಶ್ ಪ್ರಿತಮ್ ಹಾಗೂ ಶ್ರೀ ನಾಗೇಂದ್ರ, ನಗರ ಪಾಲಿಕೆ ಸದಸ್ಯರು ಇವರು 24 x 7 ನೀರು ಪೂರೈಕ್ಕೆಗೆ ಕೌನ್ಸಿಲ್ ಅನುಮೊದನೆ ನಿಡಿದೆ. ಜಸ್ಕೊ ಬಗ್ಗೆ ಎಂದು ನಾವು ಅನುಮತಿ ನೀಡಿಲ್ಲ. ಕೇಂದ್ರದಿಂದ ದನಸಹಾಯ ಬಂದಿದ್ದು ಗ್ಲೋಬಲ್ ಟೆಂಡರ್ ಮೂಲಕ ಜಸ್ಕೊಗೆ ನೀಡಿದ್ದು ಪಾರದರ್ಶಕವಾಗಿದೆ. ಯಾವುದೇ ಅವ್ಯವಹಾರವಿಲ್ಲ, ಅದ್ದರಿಂದ ಸದರಿ ಯೋಜನೆಯನ್ನು ಸದುಪಯೋಗ ಮಾಡಬೇಕೆಂದು ಸೂಚಿಸಿದರು.

- ಶ್ರೀ ವಿಶ್ವನಾಥ್, ಲೋಕಸಭಾ ಸದಸ್ಯರು, ಈ ಹಿಂದೆ ನಗರಪಾಲಿಕೆಯು ನೀರಿನ ಮೂಲಗಳನ್ನು ನಾಲೆಯಿಂದ ಬದಲಾಗಿ ನದಿಗೆ ವರ್ಗಾಯಿಸಲು 2004 ರಲ್ಲಿ ಕೆಲಸ ನಿರ್ವಹಿಸಿದಾಗ, ಆ ಸಮಯದಲ್ಲಿ ಸುಮಾರು ರೂ. 85 ಲಕ್ಷ ಮೊತ್ತವನ್ನು ಪಾಲಿಕೆಯು ಭರಿಸಲು ದುಸ್ತರವಾಯಿತು. ಪಾಲಿಕೆಯ ಸಂಪನ್ಮೂಲಗಳಲ್ಲಿ ಈ ರೀತಿಯ ದೊಡ್ಡ ಮೊತ್ತದ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಸಾಧ್ಯವಿಲ್ಲದಿರುವುದರಿಂದ ಸರ್ಕಾರದ ವಿಶೇಷ ಅನುದಾನ ಅಥವಾ ಹೊಸ ಯೋಜನೆ ಅವಲಂಭಿಸುವುದು ಅನಿವಾರ್ಯವಾಗಿರುತ್ತದೆ. ಈ ಸಂದರ್ಭದಲ್ಲಿ ಮೈಸೂರು ನಗರ ಪಾಲಿಕೆಗೆ

ಬಂದಿರುವ ನೀರು ಸರಬರಾಜು ವಿತರಣಾ ಜಾಲದ ಕಾಮಗಾರಿಯಲ್ಲಿ ಶೇ 80 ಭಾಗವು ಕೇಂದ್ರ ಸರ್ಕಾರದ ಅನುದಾನವಾಗಿದ್ದು, ಈ ರೀತಿಯ ಯೋಜನೆ ಬಹಳ ವಿರಳವಾಗಿ ಲಭ್ಯವಾಗುವುದರಿಂದ ಮತ್ತು ಈ ಯೋಜನೆಯಲ್ಲಿ ಹೊಸ ತಾಂತ್ರಿಕತೆ ಅಳವಡಿಸಿಕೊಂಡ ಪೈಪ್, ವಾಲ್ವ್, ಮಾನಿಟರಿಂಗ್ ವ್ಯವಸ್ಥೆ ಇರುವುದರಿಂದ ಯೋಜನೆಗಳನ್ನು ಮುಂದುವರೆಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಯಾವುದೇ ಅಲ್ಪಸ್ವಲ್ಪ ಲೋಪದೋಷಗಳನ್ನು ಸರಿಪಡಿಸಲು ಎಲ್ಲಾ ಯೋಜನೆಗಳಲ್ಲೂ ಅವಕಾಶ ಇರುವುದರಿಂದ ತಾಂತ್ರಿಕ ಪರಿಣಿತರ ಅಭಿಪ್ರಾಯದಂತೆ ಕ್ರಮ ವಹಿಸಲು ಸಾಧ್ಯವಿರುವುದನ್ನು ತಿಳಿಸುತ್ತಾ ಕಾಮಗಾರಿ ಮುಂದುವರೆಸಲು ಸೂಚಿಸಿದರು.

- ಮಹಾಪೌರರು ಭಾಗ್ಯಜಲ ಯೋಜನೆ ಅಡಿಯಲ್ಲಿ ಅಳವಡಿಸುವ ನೀರಿನ ಸಂಪರ್ಕಗಳಿಗೆ ಮೀಟರ್ ಅಳವಡಿಸಲಾಗಿದ್ದರೂ ಸಹಾ ನೀರಿನ ಶುಲ್ಕವನ್ನು ಕೌನ್ಸಿಲ್ ನಿರ್ಧಾರದಂತೆ ರಿಯಾಯಿತಿ ದರದಲ್ಲಿ ವಸೂಲಿ ಮಾಡಲಾಗುವುದು ಹಾಗೂ ನೀರಿನ ಶುಲ್ಕ (ಕರ) ಪಾಲಿಕೆ ವತಿಯಿಂದಲೇ ವಸೂಲಿ ಮಾಡಲಾಗುವುದು ಮತ್ತು ಶುಲ್ಕದ ದರವನ್ನು ಪರಿಷ್ಕರಿಸ ಬೇಕಾದಲ್ಲಿ, ಪ್ರಸ್ತಾವನೆಯನ್ನು ಕೌನ್ಸಿಲ್‌ಗೆ ಮಂಡಿಸಿ, ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುವುದೆಂದು ತಿಳಿಸಿದರು. ಸಾರ್ವಜನಿಕ ನೀರು ಕೊಳಾಯಿಗಳನ್ನು ಈಗಿನಂತೆಯೇ ಯಥಾಸ್ಥಿತಿಯಲ್ಲಿಯೇ ಮುಂದುವರೆಸಲಾಗುವುದೆಂದು ತಿಳಿಸಿದರು.

- ಅಂತಿಮವಾಗಿ ಮಹಾಪೌರರು, ನಗರ ನೀರು ಸರಬರಾಜು ಮತ್ತು ನಿರ್ವಹಣೆ ಜಸ್ಕೋ ಕಂಪನಿಗೆ ಗುತ್ತಿಗೆ ತಾತ್ಕಾಲಿಕವಾಗಿದ್ದು, ಇದು ಖಾಸಗೀಕರಣವಲ್ಲವೆಂದು ತಿಳಿಸಿದರು. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಯಾರೂ ತಪ್ಪು ಮಾಹಿತಿ ನೀಡಬಾರದು ಎಂದು ತಿಳಿಸುತ್ತಾ, ಈಗ ಅನುಮೋದನೆ ಆಗಿರುವಂತೆ ಕೆಲಸ ಮುಂದುವರೆಸೋಣ ಏನಾದರೂ ತಪ್ಪಾಗಿದ್ದರೆ ಸರಿಪಡಿಸಿಕೊಂಡು ನಡೆಯೋಣ ಎಂದು ತಿಳಿಸಿದರು.

- ವಾಣಿವಿಲಾಸ್ ನೀರು ಸರಬರಾಜು ವಿತರಣಾ ಜಾಲದ ಕಾರ್ಯಚರಣೆ ಮತ್ತು ನಿರ್ವಹಣೆ ವ್ಯವಸ್ಥೆಯನ್ನು (O & M) ಜಸ್ಕೋ ಸಂಸ್ಥೆಗೆ ವಹಿಸುವ ಬಗ್ಗೆ ಸಭೆಯಲ್ಲಿದ್ದ ಕರ್ನಾಟಕ ರಕ್ಷಣಾ ವೇದಿಕೆಯ ಸದಸ್ಯರನ್ನು ಹೊರತುಪಡಿಸಿ ಕೆಲವರು ಸಂಪೂರ್ಣವಾಗಿ ಮತ್ತೆ ಕೆಲವರು ಬಾಗಶಃ ಒಪ್ಪಿಗೆ ವ್ಯಕ್ತಪಡಿಸಿದರು.

**ಸದರಿ ವಿಷಯದ ಬಗ್ಗೆ ಸುದೀರ್ಘ ಚರ್ಚೆಯ ನಂತರ, ಮೇಲಿನ ಅಂಶಗಳನ್ನು ಪರಿಗಣಿಸಿ ಕೆಳಕಂಡಂತೆ ತೀರ್ಮಾನ ತೆಗೆದುಕೊಳ್ಳಲಾಯಿತು.**

- ಕೌನ್ಸಿಲ್‌ನಲ್ಲಿ ಸದರಿ 24 x 7 ನೀರು ಸರಬರಾಜು ಯೋಜನೆಯು ಅನುಮೋದನೆಯಾಗಿರುವುದರಿಂದ, ಈ ನೀರು ಸರಬರಾಜು ಯೋಜನೆಯ ಕಾರ್ಯಚರಣೆ ಮತ್ತು ನಿರ್ವಹಣೆಯನ್ನು (O&M) ಕನಿಷ್ಠತಮ ಟೆಂಡರ್‌ದಾರರಾದ ಜಸ್ಕೋ ಕಂಪನಿಗೆ ವಹಿಸಿಕೊಡವುದು ಕಾನೂನು ಪ್ರಕಾರ ನಿರ್ಭಂದಕವಾಗಿರುವುದರಿಂದ, ಯೋಜನೆಯನ್ನು ಮುಂದುವರಿಸಿಕೊಂಡು ಹೋಗಲು ತಿರ್ಮಾನಿಸಲಾಯಿತು.

- ಪರಿಣಿತರನ್ನು ಒಳ್ಳಗೊಂಡಂತೆ ತಾಂತ್ರಿಕ ಸಲಹಾ ಸಮಿತಿಯನ್ನು ತಕ್ಷಣ ರಚಿಸುವಂತೆ ತೀರ್ಮಾನಿಸಲಾಯಿತು ಹಾಗೂ ನ್ಯೂನ್ಯತೆಗಳ ಬಗ್ಗೆ ಮತ್ತು ಸಂಬಂಧಿಸಿದ ಇತರೇ ವಿಷಯಗಳ ಬಗ್ಗೆ ಸಲಹಾ ಸಮಿತಿಯು ಪರಿಶೀಲಿಸಿ ವರದಿನೀಡುವಂತೆ ತೀರ್ಮಾನಿಸಲಾಯಿತು.

- ಸದರಿ ತಾಂತ್ರಿಕ ಸಲಹಾ ಸಮಿತಿಯು ಜಸ್ಕೋದೊಂದಿಗೆ ಮಾಡಿಕೊಂಡಿರುವ ಕರಾರಿನ ಅಧ್ಯಯನ ಮಾಡಿ ಯಾವ ಬಾಬ್ತು ಜೆಸ್ಕೋ ಕಂಪನಿಗೆ ಅಧಿಕವಾಗಿದೆ ಎಂಬುದರ ಬಗ್ಗೆ ವರದಿ ನೀಡಲು ತಿರ್ಮಾನಿಸಲಾಯಿತು.

- ಯೋಜನೆಯ ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ಕಾರ್ಯಗತಗೊಳಿಸಲು ಜೆಸ್ಕೋ ಕಂಪನಿಯವರಿಗೆ (O&M) ಹಸ್ತಾಂತರಿಸಲು ಸೂಕ್ತ ಕ್ರಮತೆಗೆದುಕೊಳ್ಳಲು ಸೂಚಿಸಲಾಯಿತು.

¸À¨sÀUÉ ºÁdjzÀÝ ªÀiÁ£Àå ¯ÉÆÃPÀ¸À¨sÁ ¸ÀzÀ¸ÀågÀÄ, «zsÁ£À¸À¨sÁ ¸ÀzÀ¸ÀågÀÄ, J¯Áè £ÀUÀgÀ¥Á°PÉ ¸ÀzÀ¸ÀågÀÄUÀ¼ÀÄ, ¸ÀAWÀ ¸ÀA¸ÉÜUÀ¼À ¥Àæw¤¢üUÀ¼ÀÄ, ¥ÀwæPÁ ªÀiÁzsÀåªÀÄzÀªÀjUÉ ºÁUÀÆ J¯Áè C¢üPÁjUÀ½UÉ ªÀAzÀ£ÉUÀ¼ÉÆA¢UÉ ¸À¨sÉAiÀÄ£ÀÄß ªÀÄÄPÁÛAiÀÄ UÉÆ½¸À¯Á¬ÄvÀÄ.

**ಮಹಾಪೌರರು,**
**ಮೈಸೂರು ಮಹಾನಗರ ಪಾಲಿಕೆ,**

**ಜಿಲ್ಲಾಧಿಕಾರಿಗಳು ಮತ್ತು ವಿಶೇಷಾಧಿಕಾರಿಗಳು,**
**ಜವಹರಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ**

ಮೈಸೂರು.　　　　　　　　　　　　　　　　　　　ಯೋಜನೆ,
ಮೈಸೂರು.

**ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ:**

1. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಸಚಿವರ ಗಮನಕ್ಕೆ ತರುವಂತೆ ಕೋರಿದೆ.
2. ಮಾನ್ಯ ಮುಖ್ಯ ಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹಾಗೂ ವಿದಾನಸಭೆಯ ಸದಸ್ಯರು, ಕೃಷ್ಣರಾಜ ಕ್ಷೇತ್ರ, ಮೈಸೂರು.
3. ಮಾನ್ಯ ಲೋಕಸಭಾ ಸದಸ್ಯರು, ಮೈಸೂರು ಕ್ಷೇತ್ರ, ಮೈಸೂರು.
4. ಮಾನ್ಯ ವಿಧಾನಸಭಾ ಸದಸ್ಯರು, ಚಾಮರಾಜ ಕ್ಷೇತ್ರ, ಮೈಸೂರು.
5. ಮಾನ್ಯ ವಿಧಾನಸಭಾ ಸದಸ್ಯರು, ನರಸಿಂಹರಾಜ ಕ್ಷೇತ್ರ, ಮೈಸೂರು.
6. ಮಾನ್ಯ, ವಿಧಾನಸಭಾ ಸದಸ್ಯರು, ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು.
7. ಮಾನ್ಯ ವಿಧಾನ ಪರಿಷತ್ ಸದಸ್ಯರು
8. ಮಾನ್ಯ ಮಹಾಪೌರರು, ಮೈಸೂರು ನಗರಪಾಲಿಕೆ, ಮೈಸೂರು.
9. ಮಾನ್ಯ ಉಪ ಮಹಾ ಪೌರರು, ಮೈಸೂರು ನಗರಪಾಲಿಕೆ, ಮೈಸೂರು.
10. ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ದಿ ಇಲಾಖೆ, ಕರ್ನಾಟಕ ಸರ್ಕಾರ 4ನೇ ಮಹಡಿ, ವಿಕಾಸಸೌಧ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.
12. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
13. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ. ಸಿಲ್ವರ್ ಜ್ಯುಬಲಿ ಬ್ಲಾಕ್, 2ನೇ ಮಹಡಿ, Unity ಕಟ್ಟಡ, 3ನೇ ಅಡ್ಡರಸ್ತೆ, ಮಿಷನ್ ರಸ್ತೆ, ಬೆಂಗಳೂರು.
14. ವ್ಯವಸ್ಥಾಪಕ ನಿರ್ದೇಶಕರು, ಕೆ,ಯು,ಡಬ್ಲ್ಯೂ,ಎಸ್, ಮತ್ತು ಡಿ.ಬಿ., ನಂ. 6, ಜಲಭವನ, 1ನೇ ಹಂತ, 1ನೇ ಸ್ಟೇಜ್, ಬಿ.ಟಿ.ಎಂ. ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು 560029.
15. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿ., ಕೆಂಗಲ್ ಹನುಮಂತಯ್ಯ ಜೋಡಿ ರಸ್ತೆ, ಶಾಂತಿನಗರ, ಬೆಂಗಳೂರು.
16. ಆಯುಕ್ತರು, ಪಾರಾಂಪರಿಕ ಇಲಾಖೆ, ಅರ್ಕ್ಯಾಲಜಿ ಮ್ಯೂಸಿಯಂ ಮತ್ತು ಪಾರಂಪರಿಕ, ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರ್ಬಾ ರಸ್ತೆ, ಬೆಂಗಳೂರು.19.
17. ಆಯುಕ್ತರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 1.

II ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

1. ಆಯುಕ್ತರು, ಮೈಸೂರು ನಗರಪಾಲಿಕೆ, ಮೈಸೂರು.
2. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
3. ಆಯುಕ್ತರು, ಕೊಳಚೆ ನಿರ್ಮೂಲನ ಮಂಡಳಿ, ಶೇಷಾದ್ರಿಪ್ಮರಂ, ಬೆಂಗಳೂರು.
4. ಅಧೀಕ್ಷಕ ಇಂಜಿನಿಯರ್, ಮೈಸೂರು ನಗರಪಾಲಿಕೆ, ಮೈಸೂರು.
5. ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿ., ಮೈಸೂರು.
6. ಕಾರ್ಯಪಾಲಕ ಇಂಜಿನಿಯರ್, ಕೆ,ಯು,ಡಬ್ಲ್ಯ,ಎಸ್, ಮತ್ತು ಡಿ.ಬಿ., ನಗರವಿಭಾಗ (ಜೆಎನ್ ನರ್ಮ್) ಯಾದವಗಿರಿ, ಮೈಸೂರು.
7. ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಮೈಸೂರು.
8. ಕಾರ್ಯಪಾಲಕ ಇಂಜಿನಿಯರ್, ಕ.ರಾ.ರ.ಸಾ.ನಿ.,, ಮೈಸೂರು ಗ್ರಾಮಾಂತರ ವಿಭಾಗ, ಬನ್ನಿಮಂಟಪ, ಮೈಸೂರು.
9. ಉಪ ನಿರ್ದೇಶಕರು, ಪಾರಂಪರಿಕ ಇಲಾಖೆ, ಮೈಸೂರು.
10. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.
11. ಉಪ ವಿಭಾಗಾಧಿಕಾರಿಗಳು, ಮೈಸೂರು.
12. ಉಪ ನಿರ್ಧೇಶ್ಕರು, ಪಾರಂಪಾರಿಕ ಇಲಖೆ, ಅರಮನೆ ಆವರಣ, ಮೈಸೂರು.
13. ತಹಸೀಲ್ದಾರ್, ಮೈಸೂರು ತಾಲ್ಲೂಕು ಮೈಸೂರು.
14. ತಹಸೀಲ್ದಾರ್, ನಂಜನಗೂಡು ತಾಲ್ಲೂಕು, ನಂಜನಗೂಡು.

**ಜಿಲ್ಲಾಧಿಕಾರಿಗಳು ಮೈಸೂರು ವಿಭಾಗ ಹಾಗೂ ವಿಶೇಷಾಧಿಕಾರಿಗಳು,**
**ಜವಹರಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆ,**
**ಮೈಸೂರು.**